ಶ್ರೀ ಬಿ. ವಿಟ್ಠಲದಾಸಶೆಟ್ಟಿ.—ಒಂದು ದೊಡ್ಡ ಪಟ್ಟಿಯನ್ನೇ ಓದಬೇಕಾಗುತ್ತದೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಅದನ್ನು ನಂತರ ಮುಂದೆ ಇಡಬಹುದು.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಫುಡ್ ಕಾರ್ಪೊರೇಷನ್‌ನವರು ಆಹಾರ ಸರಬರಾಜನ್ನು ಅವರ ಕೈಗೆ ತೆಗೆದುಕೊಂಡಿರುವಾಗ ಸರ್ಕಾರದ ಆಹಾರ ಇಲಾಖೆಯು ಅನೇಕ ಸಿಬ್ಬಂದಿ ವರ್ಗವನ್ನು ಕಡಮೆ ಮಾಡಿರುವುದರಿಂದ ಆಹಾರ ಖಾತೆಯನ್ನು ಮೈಸೂರು ಸರ್ಕಾರದವರು ತೆಗೆದುಹಾಕುವುದಕ್ಕೆ ಇಚ್ಚಿಸುತ್ತಾರೆಯೇ ?

ಶ್ರೀ ಬಿ. ವಿಟ್ಠಲದಾಸಶೆಟ್ಟಿ.—ಅವಶ್ಯವಿಲ್ಲದ ಅಧಿಕಾರಿ ವರ್ಗವನ್ನು ಸರ್ಕಾರ ತೆಗೆದುಹಾಕಿದೆ. ಆಹಾರದ ವಿಚಾರದಲ್ಲಿ ನಿರ್ದಿಷ್ಟವಾದ ಧೋರಣೆಯನ್ನು ಇನ್ನೂ ತನಕ ತೆಗೆದುಕೊಂಡಿಲ್ಲ.

ಶ್ರೀ ಬೋಳ ರಘುರಾಮಶೆಟ್ಟಿ.—ಬತ್ತದ ಲೆವಿಗೆ ಪರ್ಚೇಸ್ ಪ್ರೈಸ್ ಕೊಡುವುದನ್ನು ಅಕ್ರಮ ಎಂದು ರಾಜ್ಯದ ಹೈಕೋರ್ಟ್ ತೀರ್ಮಾನ ಮಾಡಿದೆ. ಇದರ ಬಗ್ಗೆ ಏನು ಕ್ರಮ ತೆಗೆದು ಕೊಳ್ಳುತ್ತೀರಿ ?

ಶ್ರೀ ಬಿ. ವಿಟ್ಠಲದಾಸಶೆಟ್ಟಿ.—ಅಕ್ರಮ ಎಂದು ತೀರ್ಮಾನ ಮಾಡಲಲ್ಲ. ಮಾರ್ಕೆಟ್ ಪ್ರೈಸ್ ಒಂದು ಇದೆ, ಕೊಡುವಂಥ ಪ್ರೈಸ್ ಅದಕ್ಕನುಗುಣವಾಗಿರುವಂತೆ ಪುನರ್‌ಪರಿಶೀಲಿಸಬೇಕು ಎಂದು ಹೈಕೋರ್ಟ್ ತೀರ್ಮಾನವಿದೆ.

SHORT NOTICE QUESTION AND ANSWER

Deputation of Reserve Police to Andhra Pradesh

5. **Sri M. NAGAPPA** (Raichur).—

Will the Chief Minister be pleased to state :—

(*a*) whether the Government of Mysore had deputed the Mysore Reserve Police to Andhra Pradesh very recently if so, the strength of Reserve Police ;

(*b*) if so, the State that has to bear the salaries and allowances and other expenditure, etc., of the said deputed Reserve Police Staff ;

(*c*) whether it is a fact that other States like Haryana, Tamil Nadu, Kerala Governments have withdrawn their forces ; if so, whether the Government of Mysore will also do so ?

Sri VEERENDRA PATIL (Chief Minister).—

(*a*) Yes. It would not be in public interest to disclose the strength of the police force.

(*b*) The expenditure will be borne by the borrowing Government.

(*c*) This Government is not aware of the action taken by the other State Governments. So far as Mysore State is concerned, the police force deputed to Andhra Pradesh has been partly withdrawn.

ಶ್ರೀ ಎಂ. ನಾಗಪ್ಪ.—ಮೈಸೂರು ಪೋಲೀಸ್ ಆಕ್ಟ್ ಮೂರನೇ ಸೆಕ್ಷನ್ ಪ್ರಕಾರ ನಮ್ಮಲ್ಲಿರುವ ಪೋಲೀಸ್ ದಳ ನಮ್ಮಲ್ಲಿ ಕೆಲಸ ಮಾಡಬೇಕೆಂದಿದೆ. ಅದನ್ನು ಬಿಟ್ಟು ಬೇರೆ ರಾಜ್ಯಗಳಿಗೆ ಸಹಿತ ಪೋಲೀಸ್ ಅಧಿಕಾರಿಗಳನ್ನು ಕಳಿಸಬಹುದು ಎನ್ನುವುದಕ್ಕೆ ಯಾವುದಾದರೂ ಕಲಮು ಇದಯೇ ?

† ಶ್ರೀ ವೀರೇಂದ್ರ ಪಾಟೀಲ್.—ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿದರೆ ಪೋಲೀಸ್ ಆಕ್ಟ್ ಎಲ್ಲ ನೋಡಿ ಹೇಳಬಹುದು. ಆದರೆ ರಾಜ್ಯದಿಂದ ಹೊರಗಡೆಗೆ ಹೋಗಿ ನಮ್ಮ ರಾಜ್ಯದ ಪೋಲೀಸ್ ದಳ ಕೆಲಸ ಮಾಡುವುದಕ್ಕೆ ಸಂಬಂಧಪಟ್ಟಂಥ ಪ್ರಶ್ನೆ ಬಂದಿರುವುದರಿಂದ ನಾನು ಒಂದು ಮಾತು ಹೇಳಬೇಕಾಗುತ್ತದೆ. ದಕ್ಷಿಣ ವಲಯದ ರಾಜ್ಯಗಳಲ್ಲಿ ಎಂದರೆ ಆಂಧ್ರ, ಮೈಸೂರು, ಮದ್ರಾಸ್ ಮತ್ತು ಕೇರಳ ರಾಜ್ಯಗಳಿಗೆ ಸಂಬಂಧಪಟ್ಟ ಹಾಗೆ ಒಂದು ಅಂಡರ್‌ಸ್ಟ್ಯಾಂಡಿಂಗ್ ಇದೆ. ಅದರ ಪ್ರಕಾರ ಕಾಮನ್ ರಿಸರ್ವ್ ಪೋಲೀಸ್ ಫೋರ್ಸ್ ಎಂದು ಮಾಡಿಕೊಂಡಿದ್ದೇವೆ. ಎರಡನೇ ರಾಜ್ಯಗಳಲ್ಲಿ ಅವಶ್ಯಕತೆ ಇದ್ದಾಗ ನಮ್ಮ ರಾಜ್ಯದ ಪೋಲೀಸ್ ದಳ ಅಲ್ಲಿ ಪಾರ್ಟಿಸಿಪೇಟ್ ಮಾಡುತ್ತದೆ ಮತ್ತು ನಾವು ಬೇಡಿದಾಗ ಅವರೂ ಕಳಿಸುತ್ತಾರೆ. ಈ ಪ್ರಕಾರ ನಡೆಯುತ್ತಿದೆ.

ಶ್ರೀ ಎಂ. ನಾಗಪ್ಪ.—ಒಂದು ಅಂಡರ್‌ಸ್ಟ್ಯಾಂಡಿಂಗ್ ಮಾಡಿಕೊಳ್ಳಲಾಗಿದೆ ಎಂದು ಹೇಳಿದರು. ಅದಕ್ಕೆ ಏನಾದರೂ ಕಾಯುದೆಯ ನಮ್ಮತಿ ಇದೆಯೇ? ಇಂಥ ಪರಿಸ್ಥಿತಿಯಲ್ಲಿ ನಮ್ಮ ಪೋಲೀಸರು ಆಂಧ್ರದಲ್ಲಿ ಯಾರಿಗಾದರೂ ಗೋಲಿ ಹೊಡೆದರೆ ಅಂಥ ಪೋಲೀಸ್ ಅಧಿಕಾರಿಗಳ ರಕ್ಷಣೆ ಮಾಡಿಕೊಳ್ಳುವುದಕ್ಕೆ ಕಾಯದೆಯ ಪ್ರೊಟೆಕ್ಷನ್ ಇದೆಯೇ? ಹಾಗಿದ್ದರೆ ಯಾವ ಕಾಯದೆಯು ಪ್ರಕಾರವಿದೆ ಎನ್ನುವುದನ್ನು ತಿಳಿಸುತ್ತಾರೆಯೇ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಕಾಯದೆ ಪ್ರಶ್ನೆ ಕೇಳುತ್ತಿದ್ದಾರೆ. ನನ್ನ ಮುಂದೆ ಇರುವ ಪ್ರಶ್ನೆ ಏನೆಂದರೆ ನಮ್ಮಿಂದ ಏನಾದರೂ ರಿಸರ್ವ್ ಪೋಲೀಸ್ ಆಂಧ್ರಕ್ಕೆ ಹೋಗಿದೆಯೇ, ಹಾಗೆ ಹೋಗಿದ್ದರೆ ಯಾವ ಕಾಲಕ್ಕೆ ಹೋಗಿದೆ ಎನ್ನುವಂಥದ್ದು. ನಾನು ಆಗಲೇ ಹೇಳಿದ ಹಾಗೆ ದಕ್ಷಿಣ ವಲಯದಲ್ಲಿ ಒಂದು ಕಾಮನ್ ರಿಸರ್ವ್ ಪೋಲೀಸ್ ಫೋರ್ಸ್ ಮಾಡಿದ್ದೇವೆ. ನಮಗೆ ಅವಶ್ಯವಿದ್ದಾಗ ಅದರಿಂದ ನಾವೂ ಸಹಾಯವನ್ನು ಪಡೆಯಬಹುದು ಮತ್ತು ನಮ್ಮನ್ನು ಸಹಾಯ ಬೇಕೆಂದು ಕೇಳಿದಾಗ ನೆರೆಯ ರಾಜ್ಯದ ಸರ್ಕಾರದವರಿಗೂ ಸಹಾಯ ಕೊಟ್ಟಿದ್ದೇವೆ. ಈ ರೀತಿ ಒಂದು ರಾಜ್ಯದಿಂದ ಮತ್ತೊಂದು ರಾಜ್ಯ ಸಹಾಯವನ್ನು ಪಡೆಯುವುದಕ್ಕೆ ಅವಕಾಶವಿದೆ.

ಶ್ರೀ ಸದಾಶಿವಪ್ಪ ಪಾಟೀಲ್.—ಆಂಧ್ರ ಪ್ರದೇಶ ಬಿಟ್ಟು ಸೌತ್‌ಜೋನ್‌ಗೆ ಸೇರಿದ ಮದ್ರಾಸು ಅಥವ ಕೇರಳ ರಾಜ್ಯದವರು ಕೇಳಿದರೆ ತಾವು ನಮ್ಮ ರಾಜ್ಯದಿಂದ ಪೋಲೀಸಿನವರನ್ನು ಕಳಿಸಲು ತಯಾರಾಗಿದ್ದೀರಾ? ಒಂದುವೇಳೆ ಆಂಧ್ರಕ್ಕೆ ಕಳಿಸಿರುವ ನಮ್ಮ ಪೋಲೀಸು ದಳಕ್ಕೇನಾದರೂ ಅನಾಹುತವಾದರೆ ಯಾವ ಕ್ರಮ ಕೈಗೊಳ್ಳುತ್ತೀರಿ?

ಶ್ರೀ ವೀರೇಂದ್ರ ಪಾಟೀಲ್.—ಹಿಂದೆ ಡಿ. ಎಂ. ಕೆ. ಸರಕಾರ ಸಹಾಯ ಕೇಳಿದಾಗ ನಾವು ಕಳುಹಿಸಿ ಸಹಾಯಮಾಡಿದ್ದೇವೆ.

Sri J. P. SARWESH.—It is stated that in Andhra more than 1,000 police people have been killed in the Telengana agitation. May I know how many of our police people have been affected?

Mr. SPEAKER.—It does not arise.

ಶ್ರೀ ಎನ್. ಎ. ಚನ್ನೇಗೌಡ.—ಈಗ ಆಂಧ್ರ ಪ್ರದೇಶಕ್ಕೆ ಪೋಲೀಸು ಸಹಾಯ ನೀಡಿರುವ ಉದ್ದೇಶ ಮುಂದೆ ಮೈಸೂರಿಗೆ ಬೇಕಾದಾಗ ಆಂಧ್ರದವರೂ ಸಹಾಯ ಮಾಡುವರು ಅದರಿಂದ ಅನುಕೂಲವಾಗುವುದು ಎಂಬುದಲ್ಲವೇ?

Mr. SPEAKER.—It does not arise.

Sri H. SIDDAVEERAPPA.—One part of the question of Sri Sadashiv Patil was answered. May I know if something were to happen to the Mysore police who are sent to Andhra, what is the protection they are going to have? If any casualty were to happen, what is the protection they have?

Sri VEERENDRA PATIL.—I do not understand this question. If there is an agreement between two States, when we give aid, it means the force that goes there will be under the control and guidance of the Government to which we have sent our forces. We are sending our forces to the border areas. That does not mean that they must not take proper care of our forces. On the other hand they have gone there to maintain and establish law and order.

ಶ್ರೀ ಬಿ. ಭಾಸ್ಕರಶೆಟ್ಟಿ.—ಆಂಧ್ರಕ್ಕೆ ಕಳುಹಿಸಿದ ಪೋಲೀಸ್ ರೆಕ್ಯಾಚಾರ ಕೊಡುವುದು ಹಿತವಲ್ಲ ಎಂದು ಹೇಳಿದರಿ. ಎಷ್ಟು ಜನ ಜುಂಗೊಡಿಎ್ದಾರೆ, ಎಷ್ಟು ಜನ ಸತ್ತಿದ್ದಾರೆ ಎಂದು ಅಂಕಿಅಂಶವನ್ನು ಕೊಡಬಹುದೇ ?

ಶ್ರೀ ವೀರೇಂದ್ರ ಪಾಟೀಲ್.—ನನಗೆ ಗೊತ್ತಿದ್ದಹಾಗೆ ಯಾರೂ ಸತ್ತಿಲ್ಲ, ಜಖಂ ಬಗ್ಗೆ ನನ್ನ ಹತ್ತಿರ ಅಂತಹ ವರದಿ ಯಾವುದೂ ಬಂದಿಲ್ಲ, ಆದೇನಾದರೂ ಇದ್ದಿದ್ದರೆ ಅದನ್ನು ಹೇಳಬಹುದಾಗಿತ್ತು, ಆ ಸಮಾಚಾರ ನನ್ನ ಹತ್ತಿರ ಇಲ್ಲ.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಆಂಧ್ರ ಪ್ರದೇಶಕ್ಕೆ ನಮ್ಮ ಪೋಲೀಸ್ ಫೋರ್ಸ್‌ನ್ನು ಕಳುಹಿಸಿದ್ದೀರಿ, ಅದನ್ನು ಕೇಂದ್ರಸರ್ಕಾರದ ರಿಕ್ವೆಸ್ಟ್‌ಮೇರೆ ಕಳುಹಿಸಿದ್ದೀರಾ ಅಥವಾ ಕೇಂದ್ರ ಸರ್ಕಾರವು ಆದೇಶದಮೇರೆ ಕಳುಹಿಸಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ಆಗಲೇ ಹೇಳಿದೆ. ಸ್ಟೇಂಡಿಂಗ್ ಆರ್ಡರ್ ಆಫ್ ಪಾರ್ಟಿಸಿಪೇಟಿಂಗ್ ಸ್ಟೇಟ್ಸ್ ಪ್ರಕಾರ ಆಂಧ್ರದವರು ಕೇಳಿದರೆ ನಾವು ಕಳುಹಿಸುತ್ತೇವೆ, ಕೇರಳದವರು ಕೇಳಿದರೂ ಕಳುಹಿಸುತ್ತೇವೆ, ಮದ್ರಾಸ್‌ನವರು ಕೇಳಿದರೂ ಕಳುಹಿಸುತ್ತೇವೆ, ಅದೇ ರೀತಿಯಲ್ಲಿ ನಾವು ಕೇಳಿದರೂಕೂಡ ಅವರು ಕಳುಹಿಸುತ್ತಾರೆ. ಈ ಒಂದು ಅಂಡರ್ ಸ್ಟ್ಯಾಂಡಿಂಗ್ ಜೋನಲ್ ಸ್ಟೇಟ್ಸ್‌ನಲ್ಲಿ ಇದೆ.

ಶ್ರೀ ಎಂ. ನಾಗಪ್ಪ.—ಬಿಪ್ರಶ್ನೆಯಲ್ಲಿ ನಾನು ಕೇಳಿರುವುದು ಅರೋಮ್ಯುನ್ಸ್ ಮತ್ತು ಸ್ಯಾಲರಿ. ಇದನ್ನು ನಮ್ಮ ಸರ್ಕಾರದವರು ಕೊಡುತ್ತಾರೆ, ಆಂಧ್ರದವರು ಕೊಡುತ್ತಿಲ್ಲ. ಅದಕ್ಕಾಗಿಯೇ ತಮ್ಮನ್ನು ಕೇಳುತ್ತಾ ಇದ್ದೇನೆ. ಇದನ್ನು ಯಾವು ನಂಬಿಳ ಕೊಡುವುದಿಲ್ಲ. ಎಂದು ಹೇಳಿ ತಮ್ಮ ಪೋಲೀಸ್ ಫೋರ್ಸ್‌ನ್ನು ಆ ಕಾರಣಕ್ಕಾಗಿಯೇ ವಾಪಸು ತೆಗೆದುಕೊಂಡದ್ದು. ಅದ್ದರಿಂದ ಆ ವಿಷಯವನ್ನು ಸ್ಪಷ್ಟವಾಗಿ ತಿಳಿಸಬೇಕು.

ಶ್ರೀ ವೀರೇಂದ್ರ ಪಾಟೀಲ್.—ಎಕ್ಸ್‌ಪೆಂಡೀಚರ್‌ನಲ್ಲಿ ಎರಡ್ಲಾ ಬರುತ್ತದೆ, ಹೇ ಬರುತ್ತದೆ, ಡೆಪ್ಯೂಟೇಷನ್ ಅರೋಮ್ಯುನ್ಸ್ ಮತ್ತು ಇತರ ಅನುಕೂಲತೆ ರಿಸರ್ವ್ ಫೋರ್ಸ್‌ಗೆ ಏನೇನು ಕೊಡಬಹುದೋ ಅದನ್ನೆಲ್ಲಾ ಕೊಡುವಂತಹ ಜವಾಬ್ದಾರಿ ಆ ಸರ್ಕಾರದ್ದು ಆಗಿದೆ.

Sri V. N. PATIL.—Whenever any police force goes out of the State it involves greater personal risk to those who go ; if anycasualty were to be there, who will pay compensation ?

Sri VEERENDRA PATIL.—It is the responsibility of the borrowing Government and whatever is permitted under the rules here, will be given. The protection is there, whether he is working here or in the borrowing State. It is the entire responsibility of the borrowing State.

Mr. SPEAKER.—Question hour is over.

QUESTION FOR ANSWER ON THE DAY

(but not taken up)

Youth Welfare Board

165. Sri K. H. SRINIVASA (Sagar).—

Will the Minister for Finance, Planning and Youth Welfare be pleased to state :—

(*a*) whether the Government has taken a decision to constitute a Youth Welfare Board ;

(*b*) if so, will it be an Advisory Body or an Executive Body ;

(*c*) the Board outlines of its constitution, powers and functions ?